19/10/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ವಿದ್ಯೆಯನ್ನೆಂದೂ ತಪ್ಪಿಸಬಾರದು, ಯಾವಾಗ ಓದಿಸುವ ತಂದೆಯಲ್ಲಿ ಅಟೂಟ ನಿಶ್ಚಯವಿರುವುದೋ ಆಗಲೇ ವಿದ್ಯೆಯ ಮೇಲೆ ಆಸಕ್ತಿಯಿರುವುದು, ನಿಶ್ಚಯಬುದ್ಧಿ ಮಕ್ಕಳೇ ಸೇವೆ ಮಾಡುತ್ತಾರೆ"

ಪ್ರಶ್ನೆ: ಬಾಪ್ದಾದಾರವರಿಗೆ ಮಕ್ಕಳ ಯಾವ ಮಾತನ್ನು ಕೇಳಿ ಬಹಳ ಖುಷಿಯಾಗುತ್ತದೆ?

ಉತ್ತರ: ಯಾವಾಗ ಮಕ್ಕಳು ತಂದೆಗೆ ಸೇವಾ ಸಮಾಚಾರದ ಪತ್ರವನ್ನು ಬರೆಯುತ್ತಾರೆ - ಬಾಬಾ, ಇಂದು ನಾನು ಇಂತಹವರಿಗೆ ತಿಳಿಸಿದೆನು, ಅವರಿಗೆ ಇಬ್ಬರೂ ತಂದೆಯರ ಪರಿಚಯವನ್ನು ಕೊಟ್ಟೆನು.... ಇಂತಿಂತಹ ಸೇವೆ ಮಾಡಿದೆನು. ಆಗ ತಂದೆಯು ಆ ಪತ್ರಗಳನ್ನು ಓದಿ ಬಹಳ ಖುಷಿಪಡುತ್ತಾರೆ. ನೆನಪು, ಪ್ರೀತಿ ಹಾಗೂ ಖುಷಿಯ ಸಮಾಚಾರದ ಪತ್ರವನ್ನು ಬರೆಯುವುದರಿಂದ ತಂದೆಗೆ ಖುಷಿಯಾಗುವುದಿಲ್ಲ. ತಂದೆಯು ತನ್ನ ಸಹಯೋಗಿ ಮಕ್ಕಳನ್ನು ನೋಡಿ ಖುಷಿಯಾಗುತ್ತಾರೆ ಆದ್ದರಿಂದ ಸೇವೆ ಮಾಡಿ ಸಮಾಚಾರವನ್ನು ಬರೆಯಬೇಕು.

ಗೀತೆ: ನಡೆ ತಾಯಿ ನಡೆ................................

ಓಂ ಶಾಂತಿ. ಮುಳ್ಳುಗಳಿಂದ ಹೂಗಳ ಪ್ರಪಂಚದಲ್ಲಿ ಹೋಗಬೇಕಾಗಿದೆ ಎಂದು ಮಕ್ಕಳಿಗೆ ಗೊತ್ತಿದೆ. ಸತ್ಯಯುಗೀ ಪ್ರಪಂಚಕ್ಕೆ ದೈವೀ ಹೂಗಳೆಂದು ಕರೆಯಲಾಗುತ್ತದೆ. ಕಲಿಯುಗದಲ್ಲಿ ಮನುಷ್ಯರು ಮುಳ್ಳುಗಳ ಸಮಾನರಾಗಿದ್ದಾರೆ, ಒಬ್ಬರು ಇನ್ನೊಬ್ಬರಿಗೆ ತೊಂದರೆ ಕೊಡುತ್ತಾ, ದುಃಖ ಕೊಡುತ್ತಿರುತ್ತಾರೆ. ಈಗ ನೀವು ಮಕ್ಕಳು ಖುಷಿಯಾಗುತ್ತೀರಿ - ಈಗ ನಾವು ನಮ್ಮ ಆ ದೈವೀ ಹೂಗಳ ಸುಖಧಾಮಕ್ಕೆ ಹೋಗೋಣ. ಅಲ್ಲಿಗೆ ಹೋಗುವ ರಹಸ್ಯವನ್ನು ತಿಳಿಯಬೇಕಾಗಿದೆ. ಯಾವಾಗ ಚೆನ್ನಾಗಿ ಓದುತ್ತೀರೋ ಆಗಲೇ ಹೋಗುತ್ತೀರಿ. ಮೊದಲು ಓದಿಸುವವರು ಯಾರೆಂಬ ನಿಶ್ಚಯಬೇಕು. ಈ ಮಾತುಗಳನ್ನು ಯಾವುದೇ ವೇದಶಾಸ್ತ್ರಗಳಲ್ಲಿ ಬರೆಯಲ್ಪಟ್ಟಿಲ್ಲ. ಭಲೆ ಗೀತೆಯಲ್ಲಿ ರಾಜಯೋಗವೆಂದು ಬರೆಯಲಾಗಿದೆ, ರಾಜ್ಯಪದವಿಗಾಗಿ ವಿದ್ಯೆಯಾಗಿದೆ ಎಂದರೆ ಅವಶ್ಯವಾಗಿ ರಾಜ್ಯಭಾಗ್ಯವನ್ನು ಸತ್ಯಯುಗದಲ್ಲಿಯೇ ಕೊಡುತ್ತಾರೆ. ಮೊದಲಂತೂ ಓದಿಸುವ ತಂದೆಯ ಮೇಲೆ ನಿಶ್ಚಯವಿರಬೇಕು. ಇವರು ಯಾವುದೇ ಸಾಧು-ಸಂತ ಮುಂತಾದ ಮನುಷ್ಯರಂತೂ ಅಲ್ಲ. ಇವರು ನಿರಾಕಾರನಾಗಿದ್ದಾರೆ, ಎಲ್ಲಾ ಆತ್ಮಗಳ ತಂದೆ ಪರಮಪಿತ ಪರಮಾತ್ಮನಾಗಿದ್ದಾರೆ. ಯಾರಿಗೆ ಕಲ್ಪದ ಹಿಂದಿನ ತರಹ ನಿಶ್ಚಯವಿರಬೇಕೋ ಅವರಿಗೇ ಇರುತ್ತದೆ. ನೀವು ನೋಡುತ್ತೀರಿ - ಹೂಗಳ ಪ್ರಪಂಚವಾದ ಸ್ವರ್ಗಕ್ಕೆ ಹೋಗಲು ಪ್ರತಿಯೊಬ್ಬರದೂ ತಮ್ಮ-ತಮ್ಮದೇ ಆದ ಪುರುಷಾರ್ಥವಾಗಿದೆ. ಮೊದಲು ಯಾವಾಗ ಈ ನಿಶ್ಚಯವಾಗುತ್ತದೆಯೋ ಆಗ ತಕ್ಷಣ ವಿದ್ಯೆಯನ್ನು ಓದಲು ತೊಡಗಿಬಿಡುತ್ತಾರೆ. ಶಾಸ್ತ್ರಗಳಲ್ಲಿ ಕೃಷ್ಣಭಗವಾನುವಾಚವೆಂದು ಬರೆದುಬಿಟ್ಟಿದ್ದಾರೆ, ಜೊತೆಜೊತೆಯಲ್ಲಿ ರುದ್ರಜ್ಞಾನ ಯಜ್ಞವೆಂದು ಬರೆದಿದ್ದಾರೆ. ಈಗ ಇದಂತೂ ಜ್ಞಾನದ ಮಾತುಗಳಾದವು. ಮನುಷ್ಯರು ಇದಕ್ಕೆ ಪ್ರತಿಯಾಗಿ ಕೃಷ್ಣನಿಗೆ ಕಟ್ಟಿಗೆ ಮುರುಳಿಯನ್ನು ಕೊಟ್ಟುಬಿಟ್ಟಿದ್ದಾರೆ. ನಿನ್ನ ಮುರುಳಿಯಲ್ಲಿ ಈಶ್ವರನ ಚಮತ್ಕಾರವಿದೆ ಎಂಬ ಗಾಯನವೂ ಇದೆಯಲ್ಲವೆ. ಈಗ ಕಟ್ಟಿಗೆ ಮುರುಳಿಯಲ್ಲಂತೂ ಈಶ್ವರೀಯ ಚಮತ್ಕಾರವಿರಲು ಸಾಧ್ಯವಿಲ್ಲ. ಅವರಂತೂ ಬಾಯಿಂದ ಮುರುಳಿಯನ್ನು ನುಡಿಸುತ್ತಾರೆ. ಕೃಷ್ಣನ ಬಾಲ್ಯತನವನ್ನೇ ತೋರಿಸುತ್ತಾರೆ, ಪರಸ್ಪರ ಆಟ-ಪಾಠಗಳನ್ನುಆಡುತ್ತಿರುತ್ತಾರೆ. ಈ ಮಾತುಗಳು ತಿಳಿದುಕೊಳ್ಳಲು ಬಹಳ ಯೋಗ್ಯವಾಗಿದೆ. ಇದನ್ನಂತೂ ಮಕ್ಕಳು ತಿಳಿದುಕೊಂಡಿದ್ದೀರಿ - ಇದು ಅವಶ್ಯವಾಗಿ ರಾಜಯೋಗವಾಗಿದೆ ಅರ್ಥಾತ್ ರಾಜ್ಯಭಾಗ್ಯವನ್ನು ಪ್ರಾಪ್ತಿ ಮಾಡಿಕೊಳ್ಳುವ ವಿದ್ಯೆಯನ್ನು ಓದಿಸುವವರ ಜೊತೆ ಯೋಗವಾಗಿದೆ. ಅವರು ಸಮ್ಮುಖದಲ್ಲಿ ಬಂದು ಓದಿಸುತ್ತಾರೆ ಇದರಲ್ಲಿ ಕಟ್ಟಿಗೆ ಮುರುಳಿಯ ಯಾವುದೇ ಮಾತಿಲ್ಲ, ಈ ಮಾತುಗಳೇ ಭಿನ್ನವಾಗಿದೆ. ನಿರಾಕಾರ ಸ್ವಯಂ ಭಗವಂತನೇ ಬಂದು ಓದಿಸುತ್ತಾರೆಂದು ಯಾರಿಗೂ ಗೊತ್ತಿಲ್ಲ. ಕೃಷ್ಣನ ಮುರುಳಿಯಲ್ಲಿ ಈಶ್ವರೀಯ ಚಮತ್ಕಾರವಿದೆ ಎಂದು ಅವರು ಕೃಷ್ಣನಿಗಾಗಿ ಹೇಳುತ್ತಾರೆ ಅಂದಮೇಲೆ ಈಶ್ವರ ಬೇರೆಯಾದರಲ್ಲವೆ. ಕೃಷ್ಣನಿಗೆ ಭಗವಂತನೆಂದಂತೂ ಹೇಳುವುದಿಲ್ಲ. ಭಗವಂತ ಅಂದರೆ ಭಗವಂತ, ಭಗವಂತನಿಗೆ ಜಾದೂಗಾರನೆಂದೂ ಹೇಳುತ್ತಾರೆ. ಸ್ವಯಂ ತಾನೇ ಬಂದು ಜಾದೂಗರಿಯನ್ನು ತೋರಿಸುತ್ತಾರೆ, ಸಾಕ್ಷಾತ್ಕಾರ ಮಾಡಿಸುತ್ತಾರೆ ಆದರೂ ಸಹ ಶ್ರೇಷ್ಠ ಪದವಿಯನ್ನು ಪ್ರಾಪ್ತಿ ಮಾಡಿಸಲು ವಿದ್ಯೆಯನ್ನು ಓದಿಸುತ್ತಾರೆ. ಮೀರಾಳೂ ಸಹ ವೈಕುಂಠವನ್ನು ನೋಡಿದಳು ಮತ್ತು ನೃತ್ಯ ಮಾಡಿದಳು ಆದರೆ ರಾಜಯೋಗವನ್ನಂತೂ ಕಲಿಯಲಿಲ್ಲ. ರಾಜಯೋಗದ ಮಾತು ಯಾವುದೂ ಶಾಸ್ತ್ರಗಳಲ್ಲಿಲ್ಲ. ಮೀರಾಳಿಗೆ ಓದಿಸುವವರಂತೂ ಯಾರೂ ಇರಲಿಲ್ಲ. ಮೀರಾಳ ಹೆಸರೂ ಸಹ ಭಕ್ತಮಾಲೆಯಲ್ಲಿದೆ. ಇದು ಜ್ಞಾನಮಾಲೆಯಾಗಿದೆ. ರಾತ್ರಿ-ಹಗಲಿನ ಅಂತರವಿದೆ. ನೀವು ಇದನ್ನು ತಿಳಿದುಕೊಂಡಿದ್ದೀರಿ - ಎಷ್ಟು ನಾವು ಜ್ಞಾನವನ್ನು ಪಡೆಯುತ್ತೇವೆಯೋ ಅಷ್ಟು ಶ್ರೇಷ್ಠರಾಗುತ್ತೇವೆ. ಅವಶ್ಯವಾಗಿ ಭಕ್ತಮಾಲೆಯೂ ಇದೆ, ಅದರಲ್ಲಿಯೂ ನಂಬರ್ವಾರ್ ಇದ್ದಾರೆ. ಅವರ ಹೆಸರುಗಳು ಪ್ರಸಿದ್ಧವಾಗಿವೆ. ಈ ಜ್ಞಾನವು ಯಾರಲ್ಲಿಯೂ ಇಲ್ಲ ಆದ್ದರಿಂದ ತಿಳಿಸಬೇಕು - ಈ ಜ್ಞಾನವನ್ನು ಕೊಡುವ ಅಥಾರಿಟಿ ತಂದೆಯಾಗಿದ್ದಾರೆ. ಅವರಿಗಾಗಿಯೇ ಬ್ರಹ್ಮಾರವರ ಮುಖಕಮಲದಿಂದ ಬ್ರಾಹ್ಮಣರನ್ನು ರಚಿಸಿ ಅವರಿಗೆ ಎಲ್ಲ ವೇದ-ಶಾಸ್ತ್ರಗಳ ಸಾರವನ್ನು ತಿಳಿಸುತ್ತಾರೆಂದು ಹೇಳಲಾಗುತ್ತದೆ. ಶಿವತಂದೆಗಂತೂ ಶಾಸ್ತ್ರಗಳನ್ನು ಕೈಯಲ್ಲಿ ಕೊಡಲು ಸಾಧ್ಯವಿಲ್ಲ ಏಕೆಂದರೆ ಅವರಂತೂ ನಿರಾಕಾರನಾಗಿದ್ದಾರೆ. ಆದ್ದರಿಂದ ಬ್ರಹ್ಮಾರವರ ಮೂಲಕ ತಿಳಿಸುತ್ತಾರೆ. ಈ ಯುಕ್ತಿಯನ್ನು ರಚಿಸಿದ್ದಾರೆ ಆದರೆ ಈ

ಎಲ್ಲಾ ಮಾತುಗಳನ್ನು ತಿಳಿಸುವವರು ಅವರೊಬ್ಬರೇ ಆಗಿದ್ದಾರೆ. ಬ್ರಹ್ಮಾರವರ ಮೂಲಕ ಸಾರವನ್ನು ತಿಳಿಸುತ್ತಾರೆಂಬುದನ್ನೂ ತೋರಿಸುತ್ತಾರೆ ಅಂದಮೇಲೆ ಅವಶ್ಯವಾಗಿ ತಿಳಿಸುವವರು ಇನ್ನೊಬ್ಬರು ಯಾರೋ ಇರಲೇಬೇಕಲ್ಲವೆ. ಈಗ ನೀವು ಪ್ರತ್ಯಕ್ಷರೂಪದಲ್ಲಿ ನೋಡುತ್ತೀರಿ, ಶಿವತಂದೆ ಯಾರು ಜ್ಞಾನಸಾಗರನಾಗಿದ್ದಾರೆ, ಅವರು ನಮ್ಮ ತಂದೆಯೂ ಆಗಿದ್ದಾರೆ, ನಮ್ಮ ಸಮ್ಮುಖದಲ್ಲಿ ಕುಳಿತಿದ್ದಾರೆ. ಭಾರತದಲ್ಲಿಯೇ ಬರುತ್ತಾರೆ ಮತ್ತು ಅವಶ್ಯವಾಗಿ ಇನ್ನೊಬ್ಬರ ಶರೀರದಲ್ಲಿ ಬರುತ್ತಾರೆ. ಇದು ಬ್ರಹ್ಮಾರವರ ಶರೀರವಾಗಿದೆ. ಪ್ರಜಾಪಿತ ಬ್ರಹ್ಮಾ ಇರುವುದೂ ಸಹ ಅವಶ್ಯವಾಗಿದೆ. ಪ್ರಜಾಪಿತ ಬ್ರಹ್ಮಾರವರ ಮೂಲಕವೇ ತಂದೆಯು ಬಂದು ಬ್ರಾಹ್ಮಣ ಧರ್ಮವನ್ನು ರಚಿಸುತ್ತಾರೆ. ಧರ್ಮವನ್ನು ಹೇಗೆ ರಚಿಸಲಾಗುತ್ತದೆ? ಇದನ್ನೂ ಸಹ ನೀವು ತಿಳಿದುಕೊಂಡಿದ್ದೀರಿ. ನೀವು ಪ್ರತ್ಯಕ್ಷದಲ್ಲಿ ಬ್ರಹ್ಮಾರವರ ಸಂತಾನರಾಗಿದ್ದೀರಿ. ನಾವು ಬ್ರಾಹ್ಮಣ-ಬ್ರಾಹ್ಮಿಣಿಯರು ತಂದೆಯಿಂದ ಆಸ್ತಿಯನ್ನು ಪಡೆಯುತ್ತಿದ್ದೇವೆಂಬುದನ್ನು ಹೇಳುತ್ತಾರೆ. ಅನುಯಾಯಿಗಳೆಂದೂ ಆಸ್ತಿಯನ್ನು ಪಡೆಯಲು ಸಾಧ್ಯವಿಲ್ಲ. ಮಕ್ಕಳೇ ತಂದೆಯಿಂದ ಆಸ್ತಿಯನ್ನು ಪಡೆಯುತ್ತಾರೆ. ನೀವು ಬಂದು ಬೇಹದ್ದಿನ ಮಕ್ಕಳಾಗಿದ್ದೀರಿ. ಕ್ರಿಸ್ತನ ಅನುಯಾಯಿಗಳೆಂದು ಹೇಳುತ್ತಾರೆಯೇ ಹೊರತು ಮಕ್ಕಳೆಂದು ಹೇಳುವುದಿಲ್ಲ. ಹಾಗೆಯೇ ಬುದ್ಧ, ಗುರುನಾನಕರ ಅನುಯಾಯಿಗಳೆಂದೇ ಹೇಳುತ್ತಾರೆ, ಮಕ್ಕಳೆಂದಲ್ಲ. ಇಲ್ಲಿ ನೀವು ಮಕ್ಕಳಾಗಿದ್ದೀರಿ, ಪ್ರಜಾಪಿತ ಅವರೂ ತಂದೆಯಾದರು ಮತ್ತು ಶಿವತಂದೆಯೂ ತಂದೆಯಾದರು. ಅವರು ನಿರಾಕಾರನಾಗಿದ್ದಾರೆ, ಇವರು ಸಾಕಾರಿಯಾಗಿದ್ದಾರೆ. ಈ ಸಾಕಾರದ ಮೂಲಕವೇ ಶಿವತಂದೆಯು ಮಕ್ಕಳನ್ನು ರಚಿಸಿದ್ದಾರೆ. ಈಗ ನಿಮ್ಮಲ್ಲಿಯೂ ಸಹ ಕೆಲವರಿಗೆ ಪಕ್ಕಾ ನಿಶ್ಚಯವಿದೆ, ಇನ್ನೂ ಕೆಲವರಿಗೆ ಇಲ್ಲ. ಇದು ಅತಿ ದೊಡ್ಡ ಲಾಟರಿಯಾಗಿದೆ.

ನೀವು ತಮ್ಮ ಶರೀರ ನಿರ್ವಹಣಾರ್ಥವಾಗಿ ಕರ್ಮವನ್ನು ಮಾಡಬೇಕು ಮತ್ತು ಈ ಜ್ಞಾನವನ್ನೂ ಕಲಿಯಬೇಕಾಗಿದೆ. ಆ ವಿದ್ಯೆಯಲ್ಲಿ ಬಹಳ ಪರಿಶ್ರಮ ಪಡಬೇಕಾಗಿದೆ. ಇಲ್ಲಿಯೂ ಸಹ ತಂದೆಯು ತಿಳಿಸುತ್ತಾರೆ - ಒಂದು ಘಳಿಗೆ, ಅರ್ಧ ಘಳಿಗೆ ಅವಶ್ಯವಾಗಿ ಓದಿ. ಒಂದುವೇಳೆ ಯಾವುದೇ ಕಾರಣದಿಂದ ಪ್ರತಿನಿತ್ಯ ಓದಲು ಸಾಧ್ಯವಿಲ್ಲವೆಂದರೆ ಮೊದಲು 7 ದಿನಗಳು ಓದಿ ನಂತರ ಮುರುಳಿಯ ಆಧಾರದಿಂದ ನಡೆಯಬಹುದು. ಲಕ್ಷ್ಯವನ್ನು ಇಟ್ಟುಕೊಳ್ಳಿರಿ, ಬಾಕಿ ರೆಂಬೆ-ಕೊಂಬೆ, ಎಲೆಗಳು ಇತ್ಯಾದಿಗಳನ್ನು ತಿಳಿದುಕೊಳ್ಳುವುದು. ಅವೆಲ್ಲವೂ ಚಕ್ರದಲ್ಲಿ ಬಂದುಬಿಡುತ್ತದೆ. ನಿಮಗೆ 84 ಜನ್ಮಗಳ ರಹಸ್ಯವನ್ನೂ ತಿಳಿಸಲಾಗಿದೆ. ವೃಕ್ಷದಲ್ಲಿ ವಿಸ್ತಾರವಾಗಿದೆ, ಚಕ್ರದಲ್ಲಿ ಸಾರರೂಪದಲ್ಲಿದೆ. ಇದನ್ನು ತಿಳಿಸಲಾಗಿದೆ - ಇದು ವಿಭಿನ್ನ ಮನುಷ್ಯಸೃಷ್ಟಿ ಚಕ್ರವಾಗಿದೆ. ಮೊದಲು ಒಂದೇ ಧರ್ಮವಿರುತ್ತದೆ ನಂತರ ವೃದ್ಧಿಯಾಗುತ್ತದೆ. ಹೇಗೆ ಬೇರು ಹೊರಡುತ್ತದೆಯೆಂದು ವೃಕ್ಷವನ್ನು ತೋರಿಸಲಾಗಿದೆ. ಎಷ್ಟು ಸಹಜವಾದ ರಹಸ್ಯವಾಗಿದೆ! ಡ್ರಾಮಾ ಮತ್ತು ವೃಕ್ಷವನ್ನು ತಿಳಿಯಬೇಕು, ಬುದ್ಧಿಯಲ್ಲಿ ಧಾರಣೆ ಮಾಡಬೇಕು ಮತ್ತು ಅನ್ಯರಿಗೂ ತಿಳಿಸಬೇಕಾಗಿದೆ. ಇಬ್ಬರು ತಂದೆಯರ ವಿಚಾರವನ್ನಂತೂ ಅವಶ್ಯವಾಗಿ ತಿಳಿಸಬೇಕು. ಬೇಹದ್ದಿನ ತಂದೆಯಿಂದ ಸ್ವರಾಜ್ಯವು ಸಿಗುತ್ತದೆ ಆದ್ದರಿಂದ ರಾಜಯೋಗವನ್ನು ಅವಶ್ಯವಾಗಿ ಕಲಿಯಬೇಕಾಗುತ್ತದೆ. ಪರಮಪಿತ ಪರಮಾತ್ಮನೇ ಸ್ವರ್ಗದ ಸ್ಥಾಪನೆ ಮಾಡುತ್ತಾರೆ, ಅದಕ್ಕೆ ಕೃಷ್ಣಪುರಿಯೆಂತಲೂ ಹೇಳುತ್ತಾರೆ. ಕಂಸಪುರಿಯಲ್ಲಂತೂ ಕೃಷ್ಣಪುರಿಯು ಸ್ಥಾಪನೆಯಾಗಲು ಸಾಧ್ಯವಿಲ್ಲ ಆದ್ದರಿಂದ ಸಂಗಮವನ್ನು ಇಡಲಾಗಿದೆ. ನೀವು ಮಕ್ಕಳಿಗೋಸ್ಕರ ಈ ಸಂಗಮಯುಗವಾಗಿದೆ. ಉಳಿದವರೆಲ್ಲರಿಗೆ ಇದು ಕಲಿಯುಗವಾಗಿದೆ. ನೀವೇ ಸಂಗಮದಿಂದ ಸತ್ಯಯುಗಕ್ಕೆ ಹೋಗುವವರಾಗಿದ್ದೀರಿ, ಈ ನಿಶ್ಚಯ ಬೇಕು. ಈಗ ನಾವೂ ಸಂಗಮದಲ್ಲಿದ್ದೇವೆ. ಸಂಗಮಯುಗವು ನೆನಪಿದ್ದಾಗ ಸತ್ಯಯುಗವು ನೆನಪಿರುತ್ತದೆ ಮತ್ತು ಸತ್ಯಯುಗವನ್ನು ಸ್ಥಾಪನೆ ಮಾಡುವವರ ನೆನಪೂ ಇರುತ್ತದೆ ಆದರೆ ಘಳಿಗೆ-ಘಳಿಗೆಯೂ ಮರೆತುಬಿಡುತ್ತಾರೆ. ಈಗ ನಾವು ಸಂಗಮದಲ್ಲಿದ್ದೇವೆಂದು ನೀವು ತಿಳಿಯುತ್ತೀರಿ. ಬೇಹದ್ದಿನ ತಂದೆಯು ಬರುವುದೇ ಕಲ್ಪದ ಸಂಗಮಯುಗದಲ್ಲಿ. ಗೀತೆಯಲ್ಲಿ ತಪ್ಪು ಮಾಡಿಬಿಟ್ಟಿದ್ದಾರೆ. ಗೀತೆಯೊಂದಿಗೆ ಸಂಬಂಧಪಟ್ಟಿರುವುದು ಕೇವಲ ಭಾಗವತ ಮತ್ತು ಮಹಾಭಾರತ ಮುಂತಾದುವುಗಳಾಗಿವೆ.

ತಂದೆಯು ತಿಳಿಸುತ್ತಾರೆ - ನೀವೆಲ್ಲರೂ ಸೀತೆಯರಾಗಿದ್ದೀರಿ, ನಾನು ರಾಮನಾಗಿದ್ದೇನೆ. ನೀವು ರಾವಣ ರಾಜ್ಯರೂಪಿ ಲಂಕೆಯಲ್ಲಿದ್ದೀರಿ, ಆ ಲಂಕೆಯಲ್ಲ. ಅಲ್ಲಿ ರಾವಣರಾಜ್ಯವಿತ್ತು ಎಂದಲ್ಲ. ಸತ್ಯಯುಗದಲ್ಲಿ ಲಂಕೆಯಿರುವುದಿಲ್ಲ. ಆ ಕಡೆ ಬೌದ್ಧ ಧರ್ಮವಿದೆ, ಈಗ ಬೌದ್ಧ ಧರ್ಮವು ಬಹಳ ಹರಡಿದೆ. ಈಗ ಇದನ್ನಂತೂ ಮಕ್ಕಳಿಗೆ ತಿಳಿಸಲಾಗಿದೆ - ಭಾರತವು ಮೊದಲು ಸಂಪೂರ್ಣ ಪವಿತ್ರವಾಗಿತ್ತು, ಸುಖ-ಶಾಂತಿಯಿತ್ತು, ಒಂದೇ ದೇವಿ-ದೇವತಾ ಧರ್ಮವಿತ್ತು. ಇವರು ನಮ್ಮ ಬೇಹದ್ದಿನ ತಂದೆಯಾಗಿದ್ದಾರೆ, ಅವರಿಂದ ಆಸ್ತಿಯನ್ನು ಪಡೆಯಬೇಕು. ಪುರುಷಾರ್ಥದಲ್ಲೆಂದೂ ಸುಸ್ತಾಗಬಾರದು. ನಿಶ್ಚಯವಿಲ್ಲದೇ ಪುರುಷಾರ್ಥವನ್ನು ಹೇಗೆ ಮಾಡುತ್ತೀರಿ? ತಂದೆಯು ಓದಿಸುತ್ತಾರೆ, ಅವರಿಂದ ಸ್ವರ್ಗದ ಸದಾ ಸುಖದ ಆಸ್ತಿಯು ಸಿಗುತ್ತದೆ, ಇದಂತೂ ನಿಶ್ಚಿತವಾಗಿದೆ. ಶಾಲೆಯಲ್ಲಿ ನಿಶ್ಚಯವಿಲ್ಲದೆ ಅಥವಾ ಗುರಿ-ಉದ್ದೇಶವಿಲ್ಲದೆ ಕುಳಿತುಕೊಳ್ಳುತ್ತಾರೆಯೇ! ಅಲ್ಲಂತೂ ಬಹಳ ವಿಷಯಗಳಿರುತ್ತವೆ, ಅವಕಾಶವಿರುತ್ತದೆ ಆದರೆ ಇಲ್ಲಿ ಒಂದೇ ವಿಷಯವಾಗಿದೆ. ಒಂದೇ ವಿಷಯದಿಂದ ಎಷ್ಟು ದೊಡ್ಡ ರಾಜಧಾನಿಯಾಗಿಬಿಡುತ್ತದೆ. ಯಾರು ಓದುವುದಿಲ್ಲವೋ ಅವರು ಓದಿರುವವರ ಮುಂದೆ ತಲೆಬಾಗುತ್ತಾರೆ. ಪ್ರಜೆಗಳಲ್ಲಿಯೂ ಸಹ ಯಾರು ಒಳ್ಳೆಯ ಪ್ರಜೆಗಳಿರುತ್ತಾರೆ ಅವರ ಮುಂದೆ ಕಡಿಮೆ ದರ್ಜೆಯ ಪ್ರಜೆಗಳು ತಲೆಬಾಗುತ್ತಾರೆ. ಪ್ರಜೆಗಳಲ್ಲಿಯೂ ನಂಬರ್‌ವಾರ್ ಇರುತ್ತಾರಲ್ಲವೆ. ಕೆಲವರು ಬಡವರು, ಕೆಲವರು ಸಾಹುಕಾರರು, ಒಬ್ಬರು ಇನ್ನೊಬ್ಬರಿಗೆ ಹೋಲುವುದಿಲ್ಲ. ಇದು ಎಂತಹ ನಾಟಕವಾಗಿದೆ! ಎಲ್ಲಾ ಮನುಷ್ಯರ ಮುಖಲಕ್ಷಣಗಳು ಪಾತ್ರವನ್ನು ಅಭಿನಯಿಸಲು ನಾಟಕದಲ್ಲಿ ನಿಗಧಿಯಾಗಿದೆ, ಇವು

ಎಷ್ಟು ಗುಹ್ಯ ಮಾತುಗಳಾಗಿವೆ. ಇವನ್ನು ಧಾರಣೆ ಮಾಡಿ ಯಥಾರ್ಥ ರೀತಿಯಲ್ಲಿ ತಿಳಿಸಬೇಕಾಗಿದೆ. ಎಲ್ಲರೂ ತಿಳಿಸಲು ಸಾಧ್ಯವಿಲ್ಲ. ತಂದೆಯು ಎಷ್ಟೊಂದು ಒಳ್ಳೆಯ ಮಾತುಗಳನ್ನು ತಿಳಿಸುತ್ತಾರೆ. ನಿಶ್ಚಯದಲ್ಲಿಯೇ ವಿಜಯವಿದೆ. ನಿಶ್ಚಯವಾದಾಗಲೇ ಓದುತ್ತಾರೆ. ಕೆಲವರಂತೂ ಸಂಶಯಬುದ್ಧಿಯವರಾಗಿ ವಿದ್ಯೆಯನ್ನು ಬಿಟ್ಟುಬಿಡುತ್ತಾರೆ. ಅಹೋ ಮಾಯೆ ತಕ್ಷಣ ಬಿರುಗಾಳಿಯನ್ನು ತಂದು ಸಂಶಯದಲ್ಲಿ ಹಾಕಿಬಿಡುತ್ತದೆ. ಸಂಶಯಬುದ್ಧಿ ವಿನಃಶ್ಯಂತಿ. ಏರಿದರೆ ವೈಕುಂಠ ರಸ ಬಿದ್ದರೆ ಚಕನಾಚೂರ್. ಅಂತರವಂತೂ ಬಹಳ ಇದೆ, ಬಿದ್ದರೆ ಒಂದೇ ಸಲ ಚಂಡಾಲರು. ಏರಿದರೆ ಒಂದೇ ಸಲ ಚಕ್ರವರ್ತಿಗಳು. ಎಲ್ಲವೂ ವಿದ್ಯೆಯ ಮೇಲೆ ಆಧಾರಿತವಾಗಿದೆ. ನಿರಾಕಾರನು ಹೇಗೆ ಶಿಕ್ಷಕರಾಗುತ್ತಾರೆಂದು ಮೊದಲು ಎಂದಾದರೂ ಕೇಳಿದಿರಾ! ಈಗ ಶಿವತಂದೆಯ ಮೂಲಕ ಕೇಳುತ್ತೀರಿ. ಈಗ ನಿಮಗೆ ನಿಶ್ಚಯವಾಗಿದೆ. ನಾನು ನಿಮ್ಮ ತಂದೆಯಾಗಿದ್ದೇನೆ, ಪತಿತ-ಪಾವನನೂ ಆಗಿದ್ದೇನೆ, ಜ್ಞಾನಸಾಗರನೆಂದೂ ಹೇಳುತ್ತೀರಿ ಅಂದಮೇಲೆ ಈಗ ನೀವು ಈ ಜ್ಞಾನದಿಂದ ಚಕ್ರವರ್ತಿಗಳಾಗಬೇಕು, ಈ ನಿಶ್ಚಯವಿರಬೇಕಲ್ಲವೆ. ನಿಶ್ಚಯದಲ್ಲಿಯೇ ಮಾಯೆಯು ವಿಘ್ನಗಳನ್ನು ಹಾಕುತ್ತದೆ. ಶತ್ರು ಸಮ್ಮುಖದಲ್ಲಿ ನಿಂತಿದ್ದಾನೆ. ನಿಮಗೆ ಗೊತ್ತಿದೆ - ಮಾಯೆಯು ನಮ್ಮ ಶತ್ರುವಾಗಿದೆ, ಘಳಿಗೆ-ಘಳಿಗೆಯೂ ಮೋಸ ಮಾಡುತ್ತದೆ, ವಿದ್ಯೆಯಲ್ಲಿ ಸಂಶಯ ಹಾಕಿಬಿಡುತ್ತದೆ. ಸಂಶಯದಲ್ಲಿ ಬಂದು ಅನೇಕ ಮಕ್ಕಳು ವಿದ್ಯೆಯನ್ನು ಬಿಟ್ಟುಬಿಡುತ್ತಾರೆ. ವಿದ್ಯೆಯನ್ನು ಬಿಟ್ಟರೆಂದರೆ ಅರ್ಥ ತಂದೆ, ಶಿಕ್ಷಕ, ಸದ್ಗುರುವನ್ನು ಬಿಟ್ಟುಬಿಟ್ಟರು. ಅಲ್ಲಂತೂ ಗುರುಗಳು ಬದಲಾಗುತ್ತಿರುತ್ತಾರೆ. ಅನೇಕ ಗುರುಗಳನ್ನು ಮಾಡಿಕೊಳ್ಳುತ್ತಿರುತ್ತಾರೆ ಆದರೆ ಇವರಂತೂ ಒಬ್ಬರೇ ಸದ್ಗುರುವಾಗಿದ್ದಾರೆ. ಇವರು ತಮ್ಮ ಮಹಿಮೆ ಮಾಡಿಕೊಳ್ಳುವುದಿಲ್ಲ, ತನ್ನ ಪರಿಚಯವನ್ನು ಕೊಡುತ್ತಾರೆ. ಶಿವಾಯ ನಮಃ, ನೀವೇ ಮಾತಾ-ಪಿತಾ ಎಂದು ಹಾಡುತ್ತಾರೆ ಆದರೆ ಏನನ್ನೂ ತಿಳಿದುಕೊಂಡಿಲ್ಲ. ಕೇವಲ ಹೇಳುತ್ತಿರುತ್ತಾರೆ, ಪೂಜೆ ಮಾಡುತ್ತಿರುತ್ತಾರೆ. ಶಿವ ಯಾರೆಂದು ನೀವೀಗ ತಿಳಿದುಕೊಂಡಿದ್ದೀರಿ. ಶಿವನ ನಂತರ ಬ್ರಹ್ಮಾ-ಸರಸ್ವತಿ ಬರುತ್ತಾರೆ. ನಂತರ ಲಕ್ಷ್ಮಿ-ನಾರಾಯಣರು ಬರುತ್ತಾರೆ. ಮೊದಲು ಶಿವತಂದೆ ನಂತರ ಬ್ರಹ್ಮಾ-ವಿಷ್ಣು-ಶಂಕರ. ತಂದೆಯು ತಿಳಿಸುತ್ತಾರೆ - ನಾನು ಮೊಟ್ಟಮೊದಲು ಬ್ರಹ್ಮಾರವರಲ್ಲಿ ಪ್ರವೇಶ ಮಾಡುತ್ತೇನೆ. ಮೊದಲು ಇವರನ್ನು ರಚಿಸುತ್ತೇನೆ. ಬ್ರಹ್ಮಾರವರ ಮೂಲಕ ಸ್ಥಾಪನೆ ನಂತರ ಬ್ರಹ್ಮಾನೇ ವಿಷ್ಣುವಾಗಿ ಪಾಲನೆ ಮಾಡುತ್ತಾರೆ. ಇವೆಲ್ಲಾ ವಿಷಯಗಳನ್ನು ನೋಟ್ ಮಾಡಿಕೊಳ್ಳಬೇಕು ನಂತರ ಅನ್ಯರಿಗೆ ತಿಳಿಸುವ ಪ್ರಯತ್ನ ಪಡಬೇಕು. ಕೆಲವರಂತೂ ಬಹಳ ಚೆನ್ನಾಗಿ ತಿಳಿಸುತ್ತಾರೆ. ತಂದೆಯ ಮಾತೇ ಬೇರೆಯಾಗಿದೆ. ಕೆಲವೊಮ್ಮೆ ಶಿವತಂದೆಯು ತಿಳಿಸುತ್ತಾರೆ, ಕೆಲವೊಮ್ಮೆ ಇವರೂ ತಿಳಿಸುತ್ತಾರೆ. ನೀವು ಯಾವಾಗಲೂ ತಿಳಿಯಿರಿ - ನಮಗೆ ಶಿವತಂದೆಯು ತಿಳಿಸುತ್ತಾರೆ. ಶಿವತಂದೆಯನ್ನು ನೆನಪು ಮಾಡುವುದರಿಂದ ವಿಕರ್ಮಗಳು ವಿನಾಶವಾಗುತ್ತವೆ. ನೀವು ತಿಳಿದುಕೊಳ್ಳಿ - ಶಿವತಂದೆಯು ಇವರ ಮೂಲಕ ಹೊಸಹೊಸ ವಿಷಯಗಳನ್ನು ತಿಳಿಸುತ್ತಾರೆ, ಬಹಳ ಯುಕ್ತಿಯಿಂದ ತಿಳಿಸುತ್ತಾರೆ ಅಂದಾಗ ಮಕ್ಕಳು ತಿಳಿಯಲೂ ಬೇಕು. ಮೊದಲು ನಿಶ್ಚಯ ಮಾಡಿಕೊಳ್ಳಬೇಕು. 7 ದಿನಗಳಲ್ಲಿಯೂ ಸಹ ಬಹಳ ಒಳ್ಳೆಯ ಜ್ಞಾನದ ಬಣ್ಣವು ಅಂಟುತ್ತದೆ ಆದರೆ ಮಾಯೆಯೂ ಸಹ ಬಹಳ ತೀಕ್ಷ್ಣವಾಗಿದೆಯಲ್ಲವೆ ಆದ್ದರಿಂದ ಮೊದಮೊದಲು ಈ ನಿಶ್ಚಯ ಕುಳಿತುಕೊಳ್ಳಬೇಕು - ತಂದೆ ಪರಮಪಿತ ಪರಮಾತ್ಮನು ಸ್ವರ್ಗದ ರಚಯಿತನಾಗಿದ್ದಾರೆ ಅಂದಮೇಲೆ ಅವಶ್ಯವಾಗಿ ಅವರೇ ರಾಜಯೋಗವನ್ನು ಕಲಿಸಿರಬೇಕು, ಕೃಷ್ಣನಂತೂ ಕಲಿಸಲು ಸಾಧ್ಯವಿಲ್ಲ. ಅವರು ಬರುವುದೇ ಸತ್ಯಯುಗದಲ್ಲಿ. ಸ್ವರ್ಗದ ರಚಯಿತ ಶಿವತಂದೆಯಾಗಿದ್ದಾರೆ. ಕೃಷ್ಣನ ತನುವಿನಲ್ಲಿ ಬಂದರೆಂದು ಒಂದುವೇಳೆ ಯಾರಾದರೂ ಹೇಳಬಹುದು ಆದರೆ ಕೃಷ್ಣನಂತೂ ಆ ರೂಪದಲ್ಲಿ ಬರಲು ಸಾಧ್ಯವಿಲ್ಲ. ಕೃಷ್ಣನು ಬರುವುದೇ ಸತ್ಯಯುಗದಲ್ಲಿ. ಶಿವತಂದೆಯು ಯಾರದೇ ಗರ್ಭದಿಂದಂತೂ ಜನ್ಮ ಪಡೆಯುವುದಿಲ್ಲ. ಇವರ ಶರೀರದಲ್ಲಿ ಪ್ರವೇಶ ಮಾಡಿ ಇವರ ಪರಿಚಯವನ್ನು ಕೊಡುತ್ತಾರೆ, ನಾನು ಇವರಿಗೆ ಬ್ರಹ್ಮಾ ಎಂದು ಏಕೆ ಹೆಸರಿಟ್ಟೆನು? ಏಕೆಂದರೆ ಇವರೇ ಪ್ರಾರಂಭದಿಂದ ಹಿಡಿದು ಅಂತ್ಯದವರೆಗೆ ಪಾತ್ರವನ್ನು ಅಭಿನಯಿಸುತ್ತಾರೆ. ನಿಮಗೂ ಸಹ ಬಹಳ ಒಳ್ಳೊಳ್ಳೆಯ ಹೆಸರುಗಳನ್ನು ಇಟ್ಟಿದ್ದೆನು, ಎಷ್ಟೊಂದು ಮಕ್ಕಳ ಹೆಸರುಗಳು ಬಂದವು ಆಶ್ಚರ್ಯವಲ್ಲವೆ. ಅಷ್ಟು ಶೀಘ್ರವಾಗಿ 250 ಜನ ಮಕ್ಕಳ ಹೆಸರುಗಳು ಬಂದುಬಿಟ್ಟವು. ಇಷ್ಟೊಂದು ಹೆಸರುಗಳು ಇಲ್ಲಿನ ಬ್ರಾಹ್ಮಣರು ಇಡಲು ಸಾಧ್ಯವಿಲ್ಲ. ಸಂದೇಶಿಯು ಶೀಘ್ರವಾಗಿ ಹೆಸರುಗಳನ್ನು ತೆಗೆದುಕೊಂಡು ಬಂದರು. ಬೇಹದ್ದಿನ ತಂದೆಯು ಹೆಸರುಗಳನ್ನಿಟ್ಟರು ಇದು ಎಷ್ಟು ವಿಚಿತ್ರವಾಗಿದೆ. ತಂದೆಯೂ ವಿಚಿತ್ರ, ಗುರಿ-ಉದ್ದೇಶವೂ ವಿಚಿತ್ರವಾಗಿದೆ.

ನೀವು ರಾಜರಿಗೂ ರಾಜರಾಗುತ್ತೀರಿ. ಲಕ್ಷ್ಮಿ-ನಾರಾಯಣರ ಚಿತ್ರವು ಬಹಳ ಸ್ಪಷ್ಟವಾಗಿದೆ. ಮೇಲೆ ತ್ರಿಮೂರ್ತಿ ಚಿತ್ರವು ಬಹಳ ನಿಖರವಾಗಿದೆ. 84 ಜನ್ಮಗಳನ್ನೂ ಸಹ ಅವಶ್ಯವಾಗಿ ತೆಗೆದುಕೊಳ್ಳಬೇಕಾಗಿದೆ. ಕಲಿಯುಗದ ಅಂತ್ಯವು ಪತಿತ, ಸತ್ಯಯುಗದ ಆದಿಯು ಪಾವನವಾಗಿದೆ. ಮಕ್ಕಳು ಸರ್ವೀಸಿನ ಪ್ರತ್ಯಕ್ಷ ಪ್ರಮಾಣವನ್ನು ಕೊಡಬೇಕು ಅರ್ಥಾತ್ ಸಾಕ್ಷಿಯನ್ನು ತೋರಿಸಬೇಕು - ಬಾಬಾ, ನಾವು ಈ ಚಿಕ್ಕ-ಚಿಕ್ಕ ಪತ್ರಿಕೆಗಳನ್ನು ಮಾಡಿಸಿದೆವು. ಮೇಲೆ ಶಿವತಂದೆ, ತ್ರಿಮೂರ್ತಿ ಮತ್ತು ಇಬ್ಬರೂ ತಂದೆಯರ ಪರಿಚಯವಿರಲಿ. ಈ ವಿಷಯವು ಅವಶ್ಯವಾಗಿ ಇರಬೇಕು. ಇಂತಿಂತಹ ಪತ್ರಿಕೆಗಳನ್ನು ಮುದ್ರಿಸಿ ಹೆಚ್ಚಿನ ಸರ್ವೀಸ್ ಮಾಡಿ ಸಮಾಚಾರವನ್ನು ಕೊಡಬೇಕು ಆಗಲೇ ತಂದೆಯ ಹೃದಯವನ್ನೇರುತ್ತೀರಿ. ಪತ್ರವು ಕೇವಲ ಕ್ಷೇಮ ಸಮಾಚಾರದಲ್ಲ, ಸರ್ವೀಸ್ ಮಾಡಿ ಸಮಾಚಾರವನ್ನು ಬರೆಯಬೇಕು - ಬಾಬಾ, ನಾವು ಇಂತಿಂತಹ ಸರ್ವೀಸ ಮಾಡಿದೆವೆಂದು. ಕೇವಲ ನೆನಪು, ಪ್ರೀತಿಯನ್ನು ಬರೆದರೆ ತಂದೆಯ ಹೊಟ್ಟೆಯು ತುಂಬುತ್ತದೆಯೇ. ಇಂದು ಇಂತಹವರಿಗೆ ತಿಳಿಸಿದೆವು, ಇಂದು ಪತಿಯ ಸೇವೆ ಮಾಡಿದೆವು, ಬಹಳ ಖುಷಿಪಟ್ಟರು, ಇಂತಿಂತಹ ಸರ್ವೀಸ್ ಮಾಡಿದೆವು ಎಂದು ತಂದೆಗೆ ಸಮಾಚಾರವನ್ನು ಬರೆಯಬೇಕಾಗಿದೆ. ಇಬ್ಬರು ತಂದೆಯರ ವಿಷಯವು ಮುಖ್ಯವಾಗಿದೆ. ಬೇಹದ್ದಿನ ತಂದೆಯು ಸ್ವರ್ಗದ ರಾಜ್ಯಭಾಗ್ಯವನ್ನು ಕೊಡುವವರಾಗಿದ್ದಾರೆ. ನೀವು ಎಷ್ಟು ಮಧುರಾತಿ

ಮಧುರ ಮಕ್ಕಳಾಗಿದ್ದೀರಿ. ತಂದೆಯು ತಿಳಿಸುತ್ತಾರೆ - ಇವರೆಲ್ಲರೂ ನನ್ನ ದತ್ತು ಮಕ್ಕಳು. ಇಷ್ಟು ಜನ ಕೇವಲ ದತ್ತು ಮಕ್ಕಳು ಇರಲು ಸಾಧ್ಯ. ಆ ಧರ್ಮದವರಂತೂ ಕೇವಲ ಅನುಯಾಯಿಗಳಿರುತ್ತಾರೆ ಆದರೆ ಇಲ್ಲಿ ನೀವು ಮಕ್ಕಳಾಗಿದ್ದೀರಿ. ತಂದೆಯೂ ಸಹ ಇಂತಹ ಮಕ್ಕಳನ್ನು ನೋಡಿ ಬಹಳ ಖುಷಿಪಡುತ್ತಾರೆ, ಇವರೆಲ್ಲರೂ ನನ್ನ ಮಕ್ಕಳಾಗಿದ್ದಾರೆ, ಈಗ ಅಂತ್ಯದ ಪಾತ್ರವನ್ನು ಅಭಿನಯಿಸುತ್ತಿದ್ದಾರೆ. ಈಗ ಸ್ವರ್ಗದ ಸ್ಥಾಪನೆಯಲ್ಲಿ ಸಹಯೋಗ ನೀಡಲು ನನ್ನ ಜೊತೆಗಾರರಾಗಿದ್ದಾರೆ. ಇದು ರುದ್ರ ಶಿವತಂದೆಯ ರಾಜಸ್ವ ಅಶ್ವಮೇಧ ಜ್ಞಾನಯಜ್ಞವಾಗಿದೆ. ಶಿವತಂದೆಯು ಸ್ವರ್ಗದ ಸ್ಥಾಪನೆಯನ್ನು ಹೇಗೆ ಮಾಡುತ್ತಾರೆ? ಮೊದಲು ಬ್ರಹ್ಮಾ ಮತ್ತು ಬ್ರಾಹ್ಮಣರ ಮೂಲಕ ರುದ್ರಜ್ಞಾನ ಯಜ್ಞವನ್ನು ರಚಿಸುತ್ತಾರೆ ಇದರಿಂದಲೇ ಸ್ವರ್ಗದ ಸ್ಥಾಪನೆಯಾಗುತ್ತದೆ ಅಂದಮೇಲೆ ಬ್ರಾಹ್ಮಣರೇ ಯಜ್ಞದ ಸಂಭಾಲನೆ ಮಾಡಬೇಕಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತಾ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ನಿಶ್ಚಯಬುದ್ಧಿಯವರಾಗಿ ವಿಧ್ಯಾಭ್ಯಾಸ ಮಾಡಬೇಕಾಗಿದೆ. ಎಂದೂ ಯಾವುದೇ ಮಾತಿನಲ್ಲಿ ಸಂಶಯ ಬರಬಾರದಾಗಿದೆ. ನಿಶ್ಚಯದಲ್ಲಿಯೇ ವಿಜಯವಿದೆ.

2. ತಂದೆಗೆ ಜೊತೆಗಾರರಾಗಿ ಸ್ವರ್ಗದ ಸ್ಥಾಪನೆಯಲ್ಲಿ ಪೂರ್ಣ ಸಹಯೋಗಿಗಳಾಗಬೇಕಾಗಿದೆ. ಯಜ್ಞದ ಸಂಭಾಲನೆ ಮಾಡುವ ಪಕ್ಕಾ ಬ್ರಾಹ್ಮಣರಾಗಬೇಕಾಗಿದೆ.

ವರದಾನ: ಜ್ಞಾನ ಸ್ವರೂಪರಾಗಿ ಕರ್ಮ ಸಿದ್ಧಾಂತವನ್ನು ಅರಿತು ನಡೆಯುವಂತಹ ಕರ್ಮಬಂಧನ ಮುಕ್ತ ಭವ

ಕೆಲವು ಮಕ್ಕಳು ಆವೇಶದಲ್ಲಿ ಬಂದು ಎಲ್ಲವನ್ನೂ ಬಿಟ್ಟು ದೂರ ಹೋಗಿ ತನುವಿನಿಂದ ಬೇರೆಯಾಗಿಬಿಡುವರು ಆದರೆ ಮನಸ್ಸಿನ ಲೆಕ್ಕಾಚಾರ ವಿರುವ ಕಾರಣ ಸೆಳೆಯುತ್ತಿರುವುದು. ಬುದ್ಧಿ ಹೋಗುತ್ತಿರುವುದು, ಇದೂ ಸಹ ಒಂದು ವಿಘ್ನವಾಗಿಬಿಡುವುದು ಆದ್ದರಿಂದ ಯಾರಿಂದಲಾದರೂ ದೂರ ಸರಿಯ ಬೇಕಾದರೂ ಸಹ ಮೊದಲು ನಿಮಿತ್ತ ಆತ್ಮರಿಂದ ಪರಿಶೀಲಿಸಿಕೊಳ್ಳಿ ಏಕೆಂದರೆ ಇದು ಕರ್ಮದ ಸಿದ್ಧಾಂತವಾಗಿದೆ. ಬಲವಂತವಾಗಿ ಮುರಿಯುವುದರಿಂದ ಮನಸ್ಸು ಪದೇ-ಪದೇ ಅಲ್ಲೇ ಹೋಗುವುದು. ಆದ್ದರಿಂದ ಜ್ಞಾನಸ್ವರೂಪರಾಗಿ ಕರ್ಮಸಿದ್ಧಾಂತವನ್ನು ಗುರುತಿಸಿ ಮತ್ತು ಪರಿಶೀಲಿಸಿಕೊಳ್ಳಿ ಆಗ ಸಹಜವಾಗಿ ಕರ್ಮಬಂಧನದಿಂದ ಮುಕ್ತರಾಗಿಬಿಡುವಿರಿ

ಸ್ಲೋಗನ್: ತಮ್ಮ ಸ್ವಮಾನದ ಸೀಟ್ ಮೇಲೆ ಸೆಟ್ ಆಗಿರಿ ಆಗ ಮಾಯೆ ನಿಮ್ಮ ಮುಂದೆ ಬಲಿಹಾರಿಯಾಗಿ ಬಿಡುವುದು.